

# ಅಳಿಲಿನ ಸಹಾಯ

**ಅರವಿಂದ ಜಿ. ಜೋಷಿ**

ಕಲೆ: ಸಂತೋಷ್ ಸಸಿಹಿತ್ಲು

ಪಟ್ಟಣದ ಹೊರವಲಯದ ರಸ್ತೆ ಬದಿಯಲ್ಲಿ ಹಳೇ ಕಾಲದ ಒಂದು ಮಾವಿನ ಮರ ಇತ್ತು. ಆ ಮರದ ಮೇಲೆ ಕಾಗೆಯೊಂದು ಗೂಡು ಕಟ್ಟಿಕೊಂಡು ತನ್ನ ಪುಟ್ಟ ಪುಟ್ಟ ಮರಿಗಳೊಂದಿಗೆ ವಾಸಿಸುತ್ತಿತ್ತು. ಅದೇ ಮರದ ಕೆಳಗೆ ಪುಟ್ಟ ಪೊಟರೆಯ ಒಳಗೆ ಒಂದು ಅಳಿಲು ಕೂಡ ವಾಸಿಸುತ್ತಿತ್ತು. ಈ ಕಾಗೆ ಮತ್ತು ಅಳಿಲಿನ ನಡುವೆ ಮೊದಲಿನಿಂದಲೂ ಗಾಢವಾದ ಗೆಳೆತನ ಇತ್ತು. ನಿತ್ಯವೂ ಅವು ಪರಸ್ಪರ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳುತ್ತಿದ್ದವು. ಹೀಗೆ ಒಂದು ದಿನ, ಆ ಕಾಗೆ ತನ್ನ ಮರಿಗಳಿಗೆ ಆಹಾರ ತರಲು ಹೋಗುವ ಮುನ್ನ, ಮರದ ಕೆಳಗಿದ್ದ ಅಳಿಲಿಗೆ, ತಾನು ಆಹಾರ ತರಲು ಹೋಗುತ್ತಿದ್ದೇನೆ ಆಗಾಗ ಸ್ವಲ್ಪ ಗೂಡಿನತ್ತ ಗಮನಿಸು ಎಂದು ಹೇಳಿತ್ತು.

ಅದರ ಮಾತಿಗೆ 'ಆಗಲಿ' ಎಂದು ಅದು ಅದೇ ಮರದ ಕೆಳಗೆ ಬಿದ್ದಿದ್ದ ಒಣ ಎಲೆಗಳ ಮೇಲೆ ಆಟ ಆಡುತ್ತಿತ್ತು. ಅದು ಹೀಗೆ ಆಡುತ್ತಿದ್ದಾಗ ಸ್ವಲ್ಪ ನಿಮಿಷಗಳ ನಂತರ ಎಲ್ಲಿಂದಲೋ ಬಂದ ಒಂದು ದೊಡ್ಡ ಗಾತ್ರದ ಕರಿನಾಗರಹಾವು ತನ್ನ ನಾಲಿಗೆ ಚಾಚುತ್ತ ಆ ಮರವನ್ನು ನಿಧಾನವಾಗಿ ಏರುತ್ತಿರುವುದನ್ನು ಗಮನಿಸಿತು.

ಆಗ ಅದು ಮನದಲ್ಲಿ ಓಹ್ಹೋ... ಇದು ಪ್ರಾಯಶಃ ತನ್ನ ಗೆಳೆಯನ ಗೂಡಿನಲ್ಲಿ ಇರುವ ಮರಿಗಳನ್ನು ಕಬಳಿಸಲು ಹೊರಟಂತೆ ಕಾಣುತ್ತೆ. ಛೇ... ಈಗ ನಾನು ಏನು ಮಾಡಲಿ? ಅದು ನೋಡಿದರೆ ವಿಷಪೂರಿತ ದೊಡ್ಡ ಗಾತ್ರದ ಜಂತು. ನಾನು ಅದರ ಎದುರು ಏನೂ ಅಲ್ಲ. ಮತ್ತೆ ಹೇಗೆ ಅವುಗಳನ್ನು ಉಳಿಸುವುದು ಎಂದು ಯೋಚನೆ ಮಾಡತೊಡಗಿತು. ಆಗ ಅದರ ಕಣ್ಣಿಗೆ ತಾನು ಇದ್ದ ಮರದ ಪಕ್ಕ ಇರುವ ವಿದ್ಯುತ್ ಕಂಬದಿಂದ ಮೂರನೇ ಕಂಬದ ಕೆಳಗೆ ತನ್ನ ಮಿತ್ರ ಕಾಗೆ ಆಹಾರ ಅರಸುತ್ತಿರುವುದನ್ನು ಕಂಡಿತು. ಬೇಗ ಬೇಗ ಆ ದಾರಿಗುಂಟ ಹೋಗಿ ಅದಕ್ಕೆ ವಿಷಯ ತಿಳಿಸಬೇಕೆಂದರೆ ಈ ಕಂಬದಿಂದ ಆ ಕಂಬದವರೆಗೆ ಏನಿಲ್ಲಾ ಎಂದರೂ ಐದಾರು ನಾಯಿಗಳಿದ್ದವು. ಅದರಲ್ಲಿ ಒಂದೆರಡು ಮಲಗಿದ್ದರೆ ಮತ್ತೆ ಕೆಲವು ವಿಶ್ರಾಂತಿ ಪಡೆಯುತ್ತಿದ್ದವು. ತಾನಾದರೂ ರಸ್ತೆ ಮೂಲಕ ಅಲ್ಲಿ ಹೊರಟೆನೆಂದರೆ ಇವು ನನ್ನನ್ನು ಕಬಳಿಸದೇ ಇರಲ್ಲ... ಮತ್ತೆ ಹೇಗೆ ವಿಷಯ ಕಾಗೆಗೆ ಹೇಳುವುದು? ಎಂದು ಯೋಚಿಸುತ್ತ ಒಂದು ಬಾರಿ ಕತ್ತೆತ್ತಿ ಮೇಲೆ ವಿದ್ಯುತ್ ತಂತಿ ನೋಡಿತು. ಆಗ ಅದು ಅರೆ ಕ್ಷಣವೂ ತಡ ಮಾಡದೆ ಸರಸರನೇ ತನ್ನ ಪಕ್ಕ ಇದ್ದ ವಿದ್ಯುತ್ ಕಂಬ ಏರಿ ಅಲ್ಲಿರುವ ತಂತಿ ಮೇಲೆ ಸರಸರನೇ ಮೂರನೇ ಕಂಬಕ್ಕೆ ಹೋಗಿ, ಅಲ್ಲಿಂದ ಕೆಳಗೆ ಇಳಿದು ಕಾಗೆಗೆ ವಿಷಯ ತಿಳಿಸಿ ಬೇಗನೇ ಬರುವಂತೆ ಹೇಳಿತು. ಗಾಬರಿಗೊಂಡ ಕಾಗೆ 'ಹೌದಾ' ಎನ್ನುತ್ತ ತನ್ನ ಗೂಡಿರುವ ಮರದತ್ತ ಹಾರಿ ಹೋಯಿತು. ಇತ್ತ ಆ ಅಳಿಲು ಪುನಃ ವಿದ್ಯುತ್ ಕಂಬ ಏರಿ ಸರಸರನೇ ತನ್ನ ಪೊಟರೆ ಇರುವ ಮರದ ಕಡೆ ಹೊರಟಿತು. ಆ ಕಾಗೆ ಮರದ ಕಡೆಗೆ ಬರುವ ಮುನ್ನ ತನ್ನ ಐದಾರು ಸಂಗಡಿಗರನ್ನು ಕೂಗಿ ಕರೆದು ಅವುಗಳನ್ನು ತನ್ನ ಗೂಡಿನ ಆಸುಪಾಸಿನ ಕೊಂಬೆಯಲ್ಲಿ ಅವಿತುಕೊಳ್ಳುವಂತೆ ತಿಳಿಸಿ ತಾನೂ ಒಂದೆಡೆ ಕುಳಿತುಕೊಂಡಿತ್ತು. ಅಷ್ಟರಲ್ಲಿ ನಿಧಾನವಾಗಿ ನಾಲಿಗೆ ಚಾಚುತ್ತ ಮರ ಏರಿ ಬರುತ್ತಿದ್ದ ಆ ಕರಿನಾಗರ ಈ ಕಾಗೆ ಇರುವ ಗೂಡಿನತ್ತ ಬರುತ್ತಿದ್ದಂತೆ, ಅಲ್ಲಿ ಅವಿತುಕೊಂಡ ತನ್ನ ಸಂಗಡಿಗರಿಗೆ ಆ ಕಾಗೆ ಸೂಚನೆ ಕೊಟ್ಟಿತು. ಆಗ ಅವುಗಳು ಏಕಕಾಲಕ್ಕೆ ಆ ಕರಿ ನಾಗರದ ಮೇಲೆ ದಾಳಿ ಮಾಡಿ ಎಲ್ಲೆಂದರಲ್ಲಿ ತಮ್ಮ ಹರಿತವಾದ ಕೊಕ್ಕಿನಿಂದ ಕುಕ್ಕತೊಡಗಿದವು. ಅನಿರೀಕ್ಷಿತ ದಾಳಿಯಿಂದ ಗಾಯಗೊಂಡ ಕರಿನಾಗರ ನೋವು ಸಹಿಸದೇ ಮರದಿಂದ ನೆಲಕ್ಕೆ ಧೊಪ್ ಎಂದು ಬಿದ್ದು ತನ್ನ ಜೀವ ಉಳಿಸಿಕೊಳ್ಳಲು ಗಿಡಗಂಟಿ ಒಳಗೆ ನುಸುಳಿ ಹೊರಟು ಹೋಯಿತು. ಅದನ್ನು ಕಂಡ ಕಾಗೆ ಮರದಿಂದ ಇಳಿದು ಬಂದು ತನ್ನ ಗೆಳೆಯ ಅಳಿಲಿಗೆ ಆಪತ್ತಿನಿಂದ ತನ್ನ ಮರಿಗಳನ್ನು ಉಳಿಸಲು ಸಹಾಯ ಮಾಡಿದ್ದಕ್ಕೆ ತುಂಬು ಮನದಿಂದ ಧನ್ಯವಾದಗಳನ್ನು ಹೇಳಿತು.